ಕಡಕ್ ಆಗಿ ಮಾತನಾಡುವ ವಿಕಾಸ ಹೊಸಮನಿ ಓದಿದ್ದು ಅರ್ಥಶಾಸ್ತ್ರ. ಸಾಹಿತ್ಯ ಕ್ಷೇತ್ರದ ಚಟುವಟಿಕೆಗಳನ್ನು ಇಷ್ಟಪಟ್ಟು ಮಾಡುವವರು. ಬಹುಮುಖೀ ಆಸಕ್ತಿಯ ವ್ಯಕ್ತಿ. ಓದು, ವಿಮರ್ಶೆ, ಬರಹಗಳ ಜೊತೆಗೆ ಸಿನಿಮಾ ಮತ್ತು ಕ್ರಿಕೆಟ್ ಆಸಕ್ತಿಯೂ ಅವರ ಜೊತೆಗಿದೆ. ಹಾವೇರಿ ನಿವಾಸಿ. ಅರ್ಥಶಾಸ್ತ್ರ ಉಪನ್ಯಾಸಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ರಾಘಪ್ಪ ಕೊಟ್ಟ ಮಾತಿನಂತೆ ಕಿಟ್ಟಿಯನ್ನು ದತ್ತು ತೆಗೆದುಕೊಳ್ಳುವಂತೆ ದೇಸಾಯರು ಸೂಚಿಸುತ್ತಾರೆ. ಈ ದತ್ತಕ ಪ್ರಕರಣ ರಾಘಪ್ಪನಿಗೆ ತನ್ನನ್ನು ಸೋಲಿಸಲು ಹೂಡಿರುವ ಸಂಚಿನಂತೆ ಕಾಣುತ್ತದೆ.ಇದರಿಂದ ತಪ್ಪಿಸಿಕೊಳ್ಳಲು ರಾಘಪ್ಪ ಮಾಡುವ ಪ್ರತಿತಂತ್ರ ಮಾತ್ರ ಮೈನಡುಗಿಸುವಂತಹದ್ದು.

ಯಾವುದೇ ಬೆಲೆ ತೆತ್ತಾದರೂ ಸರಿಯೇ ಗೆಲ್ಲಲೇಬೇಕೆಂಬ ಕೆಟ್ಟ ಹಠ ತೊಟ್ಟ ರಾಘಪ್ಪ ಹೆಂಡತಿ ಚಂಪಕ್ಕ ಅಜ್ಜಿಯಾಗಬೇಕಾದ ವಯಸ್ಸಿನಲ್ಲಿ ತಾಯಿಯಾಗುವಂತೆ ಮಾಡುತ್ತಾನೆ! ಇದರಿಂದ ಅವನು ಮಗಳು ರತ್ನಳಿಂದ ದೂರವಾಗಬೇಕಾಗುತ್ತದೆ. ಹೀಗೆ ತಾನೆ ಹೆಣೆದ ಬಲೆಯಲ್ಲಿ ಸಿಕ್ಕಿ ವಿಲಿ ವಿಲಿ ಒದ್ದಾಡುವ ರಾಘಪ್ಪ ಮಗಳು ಶಾಂತಳ ವಿಷಯದಲ್ಲೂ ಸೋಲುತ್ತಾನೆ. ವಸಂತನಿಂದ ಶಾಂತ ಅತ್ಯಾಚಾರಕ್ಕೊಳಗಾದರೆ, ಇತ್ತ ಆಸ್ಪತ್ರೆಯಲ್ಲಿ ಚಂಪಕ್ಕ ಸಾಯುತ್ತಾಳೆ. ಮೆಹಬೂಬಜಾನಳ ಸಾವಿನಿಂದ ಅರ್ಧ ಸತ್ತಂತಾಗಿದ್ದ ರಾಘಪ್ಪ ಹೆಂಡತಿ ಚಂಪಕ್ಕಳ ಸಾವು ಮತ್ತು ಶಾಂತಳ ದುರಂತದಿಂದ ಅಕ್ಷರಶಃ ಜೀವಚ್ಛವವಾಗುತ್ತಾನೆ! ಇದನ್ನೆಲ್ಲ ನೋಡಿದಾಗ, ತನ್ನ ಹಾದಿ ಸೋಲಿನದ್ದು ಎಂದು ಮನುಷ್ಯನಾದವನಿಗೆ ಹೊಳೆಯುವುದಿಲ್ಲ ಯಾಕೆ? ಅದೇ ದಾರಿಯಲ್ಲಿ ಮುಂದುವರೆಯುವಂತೆ ಮನಸ್ಸಿಗೆ ದೊರೆಯುವ ಪ್ರೇರಣೆಯಾದರೂ ಎಲ್ಲಿಂದ ಬರುತ್ತದೆ ಎಂದು ಪದೇ ಪದೇ ಅಚ್ಚರಿಗೊಳಗಾಗಿದ್ದೇನೆ.

ಪ್ರಚಂಡ ವ್ಯಕ್ತಿಯಾದ ರಾಘೋಬಾ ಭರಾರಿಗೆ ಸೋಲಿಗಿಂತ ಸಾವೇ ಲೇಸು. ಕೊನೆಗೂ ರಾಘಪ್ಪ ಆತ್ಮಹತ್ಯೆ ಮಾಡಿಕೊಂಡು ಸಾಯುತ್ತಾನೆ ಮತ್ತು ಆ ಮೂಲಕ ಸೋಲೊಪ್ಪಿಕೊಳ್ಳುವ ಸನ್ನಿವೇಶದಿಂದ ತಪ್ಪಿಸಿಕೊಳ್ಳುತ್ತಾನೆ! ಸಾಯುವುದಕ್ಕಿಂತ ಮೊದಲು ದೇಸಾಯರಿಗೆ ಬರೆದ ಪತ್ರದಲ್ಲೂ ಅವನು ತಾನು ಅವರೆದುರು ಸೋಲಲು ಒದಗಿದ ಕಾರಣಗಳ ಕುರಿತು ವಿವರಣೆ ನೀಡುತ್ತಾನೆಯೇ ಹೊರತು ಸೋಲೊಪ್ಪಿಕೊಳ್ಳುವುದಿಲ್ಲ ಎಂದರೆ ಅವನ ಮನಸ್ಸು ಎಷ್ಟು ಒರಟಾಗಿರಬಹುದು! ರಾಘಪ್ಪನು, ದೇಸಾಯರಿಗೆ ಸ್ವಲ್ಪ ವರ್ಷಗಳ ಹಿಂದೆ ತಾನು ಬಲಿಷ್ಠನಾಗಿದ್ದಾಗ ಮುಖಾಮುಖಿಯಾಗಿದ್ದರೆ ಅದರ ಕಥೆಯೇ ಬೇರೆಯಿತ್ತೆಂದು ಹೇಳುವುದು ಅವನೆಂತಹ ಹಠವಾದಿ ಮತ್ತು ಭಯಂಕರ ಎಂಬುದನ್ನು ಖುಜುವಾತುಪಡಿಸುತ್ತದೆ!

ಖಳನಾಯಕನಾದ ರಾಘಪ್ಪ ಮೂಲತಃ ದುಷ್ಟನಲ್ಲ. ಹಲವು ವರ್ಷಗಳ ದ್ವೇಷ ಕೊನೆಗಳಿಸಿ ಕಿಟ್ಟಿ-ರತ್ನರ ಮದುವೆಯ ಮೂಲಕ ಸಂಬಂಧ ಮರುಸ್ಥಾಪಿಸಲು ಹಾರ್ದಿಕವಾಗಿ ಯತ್ನಿಸುವುದನ್ನು ಅಲ್ಲಗಳೆಯಲಾಗದು. ಆದರೆ ಅದರಲ್ಲಿ ವಿಫಲನಾಗಿ ಮತ್ತೆ ದ್ವೇಷ ಸಾಧಿಸತೊಡಗುತ್ತಾನೆ. ದೇಸಾಯರೊಂದಿಗೆ ಕಿಟ್ಟಿಯ ಮದುವೆಯ ಕುರಿತು ಮಾತನಾಡುವ ಸಂದರ್ಭದಲ್ಲಿ ಮತ್ತು ರತ್ನ-ಗಂಗವ್ವರ ಜಗಳದಿಂದ ಗಂಗವ್ವ ಊಟ ಮಾಡದೆ ಮನೆ ಬಿಟ್ಟು ಹೋದ ಸಂದರ್ಭದಲ್ಲಿ ಆತ ನಿಜವಾಗಿಯೂ ಅಕ್ಕನೆಂಬ ಅಂತಃಕರಣ ತೋರಿಸುತ್ತಾನೆ. ರಾಘಪ್ಪನ ಅತ್ಯಂತ ಪ್ರೀತಿಪಾತ್ರ ಜೀವವಾದ ಮೆಹಬೂಬಜಾನಳ ಮರಣ ಅವನನ್ನು ತೀವ್ರ ಹತಾಶೆಗೊಳಿಸುತ್ತದೆ. ದ್ವೇಷದಿಂದ ಕುರುಡಾಗಿ ಹೆಂಡತಿಯನ್ನು ಸಾವಿನ ಬಾಯಿಗೆ ನೂಕಿದ ರಾಘಪ್ಪ ಇನ್ನಿಲ್ಲದಂತೆ ಪರಿತಪಿಸಿ ತನ್ನ ಜೀವನವನ್ನೇ ಕೊನೆಗಾಣಿಸಿಕೊಳ್ಳುವುದು ಅವನ ಜೀವನದ ರುದ್ರ ನಾಟಕಕ್ಕೆ ಒದಗಿದ ದುರಂತ ಅಂತ್ಯದಂತಿದೆ.

'ಛಲದೊಳ್ ಸುಯೋಧನ' ಎಂಬ ಮಾತಿಗೆ ಜೀವಂತ ಉದಾಹರಣೆಯಂತಿರುವ ರಾಘಪ್ಪ ಯಾನೆ ರಾಘೋಬಾ ಭರಾರಿಯದು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಒಂದು ಮರೆಯಲಾಗದ ಪಾತ್ರ. ನನ್ನನ್ನು ಸದಾ ಕಾಡುವ ಕಥಾಪಾತ್ರಗಳಲ್ಲಿ 'ಗಂಗವ್ವ ಗಂಗಾಮಾಯಿ'ಯ ರಾಘೋಬಾ ಭರಾರಿಗೆ ಅಗ್ರಸ್ಥಾನ ಸಲ್ಲುತ್ತದೆ. ●